**ದಿನಾಂಕ 28.10.2021** ರಂದು ಸಾಕ್ಷಿಯನ್ನು ಕರೆಯಸಿ ಪ್ರಮಾಣ ವಚನ ಬೋಧಿಸಲಾಯಿತು .

ಮುಂದುವರೆದ ಪಾಟೀ ಸವಾಲು : ಶ್ರೀ.ಎಸ್.ಜಿ .,ವಕೀಲರಿಂದ **1, 6** ರಿಂದ **9** ನೇ ಪ್ರತಿವಾದಿಯರ ಪರವಾಗಿ

2 ನೇ ದಾವಾ ಷಡ್ಯೂಲ್ ಸ್ವತ್ತಿನ ದಾಖಲಾತಿ ಈಗ ಯಾರ ಹೆಸರಿನಲ್ಲಿದೆ ಎಂದು ಪ್ರಶ್ನಿಸಲಾಗಿ ಸಾಕ್ಷಿ 1, 6 ನೇ ಪ್ರತಿವಾದಿ ಮತ್ತು ನಮ್ಮ ತಂದೆ ಶಿವರುದ್ರಪ್ಪ, ಶೇಖರಪ್ಪ, ಮಹೇಶ್ವರಪ್ಪ , ಪ್ರಕಾಶ ಇವರ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ. ಎಷ್ಟು ಎಷ್ಟು ಎಕರೆ ಯಾರ ಯಾರ ಹೆಸರಿನಲ್ಲಿ ಎಂದು ಪ್ರಶ್ನಿಸಲಾಗಿ ಸಾಕ್ಷಿ 7 ಎಕರೆ 1 ನೇ ಪ್ರತಿವಾದಿಯ ಹೆಸರಿನಲ್ಲಿ 34 ಗುಂಟೆ ಗಂಗಾಧರಪ್ಪ ನವರ ಹೆಸರಿನಲ್ಲಿ 30 ಗುಂಟೆ 1 ನೇ ವಾದಿಯ ಹೆಸರಿನಲ್ಲಿ, 4 ಗುಂಟೆ 7 ನೇ ಪ್ರತಿವಾದಿ ಹೆಸರಿನಲ್ಲಿ ಮತ್ತು 30 ಗುಂಟೆ 8 ನೇ ಪ್ರತಿವಾದಿಯ ಹೆಸರಿನಲ್ಲಿ, 34 ಗುಂಟೆ 9 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ.

ಮೇಲ್ಕಂಡವರ ಹೆಸರಿನಲ್ಲಿ ಜಮೀನು ಯಾವಾಗ ಮತ್ತು ಯಾವ ಕಾರಣಕ್ಕೆ ವರ್ಗಾವಣೆಯಾಗಿದೆ ಎಂದು ಪ್ರಶ್ನಿಸಲಾಗಿ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಯಾರ ಯಾರ ಹೆಸರಿನಲ್ಲಿ ಎಷ್ಟು ಎಕರೆ ಜಮೀನಿನ ದಾಖಲಾತಿ ಇದೆ ಎಂದು ತಿಳಿದುಕೊಂಡು ದಾವೆ ಹಾಕಿದ್ದೆರೊ ಅಥವಾ ಸುಮ್ಮನೆ ಹಾಕಿದ್ದಿರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ದಾಖಲೆಗಳನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಮೇಲ್ಕಂಡವರ ಹೆಸರಿಗೆ ಪಹಣಿ ಬಂದ ಬಗ್ಗೆ ನಿಮಗೆ ಯಾವಾಗ ಗೊತ್ತಾಯಿತು ಎಂದು ಪ್ರಶ್ನಿಸಲಾಗಿ ಸಾಕ್ಷಿ 10-12 ವರ್ಷಗಳ ಹಿಂದೆ ಗೊತ್ತಾಯಿತು ಎಂದು ನುಡಿಯುತ್ತಾರೆ.

ವಿಚಾರ ಗೊತ್ತಾದ ತಕ್ಷಣ ದಾವೆಯನ್ನು ಏಕೆ ಹಾಕಲಿಲ್ಲ ಎಂದು ಪ್ರಶ್ನಿಸಲಾಗಿ ಸಾಕ್ಷಿ ಪಾಲು ಕೊಡುತ್ತೇವೆ ಎಂದು ಹೇಳಿದ ಕಾರಣ ದಾವೆ ಹಾಕಿರಲಿಲ್ಲ ಎಂದು ನುಡಿಯುತ್ತಾರೆ. ದಾವೆಯನ್ನು ಯಾರು ಹಾಕಿದ್ದಾರೆ ಎಂದು ಪ್ರಶ್ನಿಸಲಾಗಿ ಸಾಕ್ಷಿ ನಮ್ಮ ತಂದೆ ಎಂದು ನುಡಿಯುತ್ತಾರೆ. ದಾವೆಯನ್ನು ನಡೆಸುವಂತೆ ನನ್ನ ತಂದೆ ನನಗೆ ಜಿಪಿಎ ಯನ್ನು ನೀಡಿರುವುದಿಲ್ಲ. ನಮ್ಮ ತಂದೆಗೆ ಮಾತ್ರ ಅವರಿಗೆ ಎಷ್ಟು ಭಾಗ ಬರಬೇಕಂದು ಗೊತ್ತೆ ವಿನಹಃ ನನಗೆ ಗೊತ್ತಿಲ್ಲ.

ನಿಪಿ 11 ಗಂಗಾಧರಪ್ಪ ರವರ ಹೆಸರಿನಲ್ಲಿ ಇರುತ್ತದೆ. ನಿಪಿ 13 ಗಂಗಾಧರಪ್ಪ, ಶೇಖರಪ್ಪ, ಮಹೇಶ್ವರಪ್ಪ, ಪ್ರಕಾಶ್ ಮತ್ತು ಶಿವರುದ್ರಪ್ಪ ನವರ ಹೆಸರಿನಲ್ಲಿ ಇರುತ್ತದೆ. ನಿಪಿ 13 ರಲ್ಲಿ 4 ಎಕರೆ 4 ಗುಂಟೆ ಇರುತ್ತದೆ. ನಿಪಿ 14 ರುದ್ರಪ್ಪನ ಹೆಸರಿನಲ್ಲಿರುತ್ತದೆ. ನಿಪಿ 15 ರಿಂದ 18 ಪಹಣಿಗಳು ಯಾರ ಹೆಸರಿನಲ್ಲಿ ಎಂದು ಪ್ರಶ್ನಿಸಲಾಗಿ ಸಾಕ್ಷಿ ಶಿವರುದ್ರಪ್ಪ, ಶೇಖರಪ್ಪ, ಮಹೇಶ್ವರಪ್ಪ, ಪ್ರಕಾಶ್ ರವರ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ.

ನಿಪಿ 13 ರಿಂದ 18 ಪಹಣಿಗಳಲ್ಲಿ ಎಷ್ಟು ಎಕರೆ ಜಮೀನು ಇರುತ್ತದೆ ಎಂದು ಪ್ರಶ್ನಿಸಲಾಗಿ ಸಾಕ್ಷಿ 5 ಗುಂಟೆ ಹನುಮಂತಪ್ಪ ರವರ ಹೆಸರಿನಲ್ಲಿ, 8 ಗುಂಟೆ ವೆಂಕಟರಮಣ ನಾಯ್ಡು ರವರ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ. ನಿಪಿ 22 , 23, 27 ಮತ್ತು 28 ಪಹಣಿ ಮಲ್ಲಜ್ಜನ ಹೆಸರಿನಲ್ಲಿ ಇರುತ್ತದೆ. ಸದರಿ ಮಲ್ಲಜ್ಜ ನನ್ನ ತಂದೆಯ ತಮ್ಮನಾಗಿರುತ್ತಾನೆ. ಸದರಿ ಪಹಣಿಗಳಲ್ಲಿ 11 ಎಕರೆ 18 ಗುಂಟೆ ಇರುತ್ತದೆ.

ಪಿ ಡಬ್ಲೂ 01

ನಿಪಿ 37 ರಿಂದ 53 ಪಹಣಿಗಳು ಯಾರ ಹೆಸರಿನಲ್ಲಿ ಎಂದು ಪ್ರಶ್ನಿಸಲಾಗಿ ರುದ್ರಪ್ಪ, ಗಂಗಾಧರಪ್ಪ, ಶಿವರುದ್ರಪ್ಪ, ಶೇಖರಪ್ಪ, ಪ್ರಕಾಶ, ವೆಂಕಟರಮಣ ನಾಯ್ಡು, ಹನುವಂತಪ್ಪ ಚಂದ್ರಪ್ಪ ರವರ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳು ಒಟ್ಟು ಕುಟುಂಬದಲ್ಲಿ ಇದ್ದ ಬಗ್ಗೆ ಪಹಣಿಗಳನ್ನು ಹಾಜರುಪಡಿಸಿಲ್ಲ ಎನ್ನುವುದು ಸರಿಯಲ್ಲ. ಮೂಲ ಪುರಷ ರುದ್ರಪ್ಪನ ಕಾಲದಲ್ಲಿಯೆ ಅವರ ಮಕ್ಕಳು ಪಾಲುವಿಭಾಗ ಮಾಡಿಕೊಂಡಿದ್ದರು ಎನ್ನುವುದು ಸರಿಯಲ್ಲ. ಇದಾದ ನಂತರ ನನ್ನ ತಂದೆ ಮತ್ತು ಸಹೋದರರು ಸಹ ಭಾಗ ಮಾಡಿಕೊಂಡಿದ್ದಾರೆನ್ನುವುದು ಸರಿಯಲ್ಲ. ಈ ರೀತಿ ವಿಭಾಗ ಆದ ಕಾರಣವೆ ಅವರವರ ಪಾಲಿಗೆ ಪಹಣಿಗಳು ಬಂದಿದೆ ಎಂದು ಸೂಚಿಸಲಾಗಿ ಸಾಕ್ಷಿ ಸಮಭಾಗ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನಮ್ಮ ಅಜ್ಜನಿಗೆ ಸಮಭಾಗ ನೀಡಿರುವುದಿಲ್ಲ. ನಮ್ಮ ಅಜ್ಜ ಪರಣ್ಣ 1961 ರಲ್ಲಿ ಪಾಲುವಿಭಾಗ ಮಾಡಿಕೊಂಡಿರುತ್ತಾರೆ. ನಿಮ್ಮ ಅಜ್ಜನಿಗೆ ಎಷ್ಟು ಭಾಗ ಕೊಟ್ಟಿದ್ದರು ಎಂದು ಪ್ರಶ್ನಿಸಲಾಗಿ ಸಾಕ್ಷಿ ಆಗ ಕೊಟ್ಟಿರಲಿಲ್ಲ ಎಂದು ನುಡಿಯುತ್ತಾರೆ.

ಈಗಾಗಲೆ ವಿಭಾಗ ಆಗಿದ್ದರೂ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಮತ್ತು ದಾವಾ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೂ ನಮ್ಮತಂದೆಗೂ ದಾವಾ ಸ್ವತ್ತುಗಳಲ್ಲಿ ಯಾವುದೆ ಹಕ್ಕು ಅಧಿಕಾರ ಮತ್ತು ಭಾಗ ಇಲ್ಲ ಎಂಬುದು ಸರಿಯಲ್ಲ.

ಉಳಿದ ಪ್ರತಿವಾದಿಗಳು ಗೈರ ಹಾಜರು, ಏಕಪಕ್ಷೀಯ ಪಾಟೀ ಸವಾಲು ಇಲ್ಲ ಎಂದು ಪರಿಗಣಿಲಸಲಾಯಿತು.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್?ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.